**OS. No.18/2016**
**P.W-1**

**( ದಿನಾಂಕ.15-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ. P.N.S ವಕೀಲರಿಂದ

ಅಸಲು ದಾವಾ ನಂಬರ 18/2016 ರಲ್ಲಿ ನನ್ನ ವಾದಪತ್ರದ 4 ನೇ ಖಂಡಿಕೆಯಲ್ಲಿ ನಾವು ನಮ್ಮ ತಂದೆಗೆ ಹಂಚಿಕೆಯಲ್ಲಿ ಭಾಗಬಂದಿದೆ ಎಂದು ಹೇಳಿದ್ದು, ನಮ್ಮ ಕಾಕಾರವರ ಜೊತೆ ಹಂಚಿಕೆಯಲ್ಲಿ ಬಂದಂತ ಆಸ್ತಿಗಳ ಬಗ್ಗೆ ನಾವು ವಾದಪತ್ರದಲ್ಲಿ ನಮೂದಿಸಿರುತ್ತೇವೆ. ಹಂಚಿಕೆ ಆಗುವ ಮುಂಚೆ ನಮ್ಮ ತಂದೆಯ ತಂದೆ ಹಾಗೂ ನಮ್ಮ ಕಾಕಾರವರ ತಂದೆ ಏಕತ್ರ ಇದ್ದರು ಎಂದರೆ ಸರಿ. ಹಂಚಿಕೆಯಲ್ಲಿ ನನ್ನ ತಂದೆಗೆ ಬಂದಂತಹ ಸ್ವತ್ತುಗಳಿಗೆ ನನ್ನ ತಂದೆ ಮಾಲೀಕರಾಗಿರುತ್ತಾರೆ ಎಂದರೆ ಸರಿ. ತದನಂತರ ನನ್ನ ತಂದೆ ಪಾಂಡುರಂಗರಾವರಿಗೆ ದಾವಾ ಸ್ವತ್ತುಗಳನ್ನು ಹಂಚಿಕೆ ಮಾಡಿ ಅವರಿಗೆ ಕೊಟ್ಟಿರುತ್ತಾರೆ ಹಾಗೂ ಪಾಂಡುರಂಗರಾವರ ಹೆಸರು ಕಂದಾಯ ದಾಖಲೆಗಳಲ್ಲಿ ಬಂದಿರುತ್ತವೆ ಎಂದರೆ ಸರಿಯಲ್ಲ.

ನಿಪಿ-15 ರಲ್ಲಿ ಬಾಹುಬಂಧದಲ್ಲಿ ಆದ ಹಂಚಿಕೆಯಿಂದ ದಾಖಲು ಮಾಡಿರುತ್ತವೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಸರ್ವೇ ನಂಬರ 7 ನಮ್ಮ ತಾತನ ಕಾಲದಿಂದ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ತಾತಾನ ಕಾಲದಿಂದಲೂ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-2 ರಲ್ಲಿ ಪ್ಯಾರಾ ನಂಬರ 8 ರಲ್ಲಿ ಮಾರಾಟಗಾರರು ತಮ್ಮ ಕುಟುಂಬದ ಅವಶ್ಯಕತೆಗಾಗಿ ಹಾಗೂ

ಕುಟುಂಬದ ಸಾಲ ತೀರಿಸುವ ಸಲುವಾಗಿ ಅದರಲ್ಲಿ ಇರುವ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಹಾಗೂ ಮಾರಾಟಗಾರರು ಅವರ ಕುಟುಂಬದ ಮ್ಯಾನೇಜರ ಅಂತ ಬರೆದಿದೆ. ನಿಡಿ-2 ರಲ್ಲಿರುವ ಸಹಿ ನನ್ನ ಅಣ್ಣ ಪಾಂಡುರಂಗರವರದ್ದು ಇರುತ್ತದೆ. ಸಾಕ್ಷಿ ಗುರುತಿಸಿದರ ಮೇರೆಗೆ ಅದನ್ನು ನಿಡಿ-2(ಎ) ಎಂದು ಗುರುತಿಸಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**